# ಕರೆಯದವರು

ಮನೆಗೇ ಬಂದು
ಕರೆಯಬೇಕೆಂದಿರಲಿಲ್ಲ
ಆಮಂತ್ರಣ ಪತ್ರಿಕೆಯನ್ನೂ
ಕಳಿಸಬೇಕೆಂದಿರಲಿಲ್ಲ
ಫೋನಾಯಿಸಿದರೂ
ಸಾಕಿತ್ತು
ಅಥವಾ ಒಂದು
ಮೆಸೇಜ್ ಕಳಿಸಿದರೂ...

ಕರೆಯದಿರಲು
ಕಾರಣ ಏನಿರಬಹುದು?
ವಿಳಾಸ
ಮರೆತು ಹೋಗಿರಬಹುದಾ?
ನಂಬರ್
ಡಿಲೀಟ್ ಆಗಿರಬಹುದಾ?
ಅಥವಾ ಇನ್ನೇನಾದರೂ...

ಹಿಂದಿನ
ದಿನದವರೆಗೂ ಕಾದಿದ್ದೆ
ಅಂಚೆಯವನಲ್ಲಿ ನೂರು
ಸಲ ವಿಚಾರಿಸಿದ್ದೆ
ಮೊಬೈಲ್ ಸದ್ದಾದಾಗ
ನಿನ್ನದೇ ಕರೆಯೆಂದು
ಅಂದುಕೊಳ್ಳುತ್ತಿದ್ದೆ

ಯಾರನ್ನೂ ಕರೆಯದಿದ್ದರೆ
ಸಂಗತಿ ಅಲ್ಲ
ಊರಿಗೆ ಊರನ್ನೇ
ಕರೆದಿದ್ದೀಯಲ್ಲ!

ಕರೆಯದಿದ್ದರೂ ಹೊರಟೆ
ಮರುಕ್ಷಣ




ಆಮಂತ್ರಣ ಇಲ್ಲದೆ
ದಕ್ಷಯಜ್ಞಕ್ಕೆ ಹೋದ ದಾಕ್ಷಾಯಿಣಿ
ಅಪಮಾನಕ್ಕೊಳಗಾಗಿ
ಯಜ್ಞಕುಂಡಕ್ಕೇ ಹಾರಿದ ಕತೆ
ನೆನಪಾಗಿ
ಮೆಟ್ಟಿದ ಚಪ್ಪಲಿ ಕಳಚಿಟ್ಟೆ

● ಸಹನಾ ಕಾಂತಬೈಲು